
ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲಿ ಮಕ್ಕಳ ಹಿತಾಸಕ್ತಿಯ ಚಿಂತನೆ



# ಅಂಕ ಆತಂಕ

■ ಪಿ.ಬಿ. ಪ್ರಸನ್ನ

**ಪ್ರತಿ ಶೈಕ್ಷಣಿಕ ವರ್ಷದ ಆರಂಭ ಎಳೆಯ ತಲೆಮಾರೊಂದನ್ನು ಸ್ಪರ್ಧೆಯ ಬಲಿಪೀಠಕ್ಕೆ ತಂದು ನಿಲ್ಲಿಸಿದಂತೆ ಕಾಣಿಸುತ್ತದೆ. ಪರೀಕ್ಷೆಗಳಲ್ಲಿ ಅಂಕಗಳನ್ನು ಪಡೆಯುವುದೇ ಶಿಕ್ಷಣ ವ್ಯವಸ್ಥೆಯ ಧ್ಯೇಯವಾದಾಗ, ಮಕ್ಕಳು ಅನಗತ್ಯ ಒತ್ತಡದಲ್ಲಿ ಹೈರಾಣಾಗುತ್ತಾರೆ. ಅಂಕ ಗಳಿಕೆಯಷ್ಟೇ ಯಶಸ್ಸಿನ ಮಾನದಂಡ ಎನ್ನುವ ಮನೋಭಾವ ಬದಲಾಗದೆ ಹೋದರೆ ಮಕ್ಕಳಿಗೂ ಕಣ್ಣಟ್ಟಿ ಕಟ್ಟಿಕೊಂಡ ರೇಸು ಕುದುರೆಗಳಿಗೂ ವ್ಯತ್ಯಾಸವೇ ಉಳಿಯುವುದಿಲ್ಲ.**

ಅದು ಒಂದು ಕಾಲೇಜ್. ಪಬ್ಲಿಕ್ ಪರೀಕ್ಷೆ ನಡೆಯುತ್ತಿತ್ತು. ವಿದ್ಯಾರ್ಥಿನಿ ಒಬ್ಬಳು ಪಿಯುಸಿ ಗಣಿತ ಪರೀಕ್ಷೆಯ ಸಿದ್ಧತೆಯಲ್ಲಿದ್ದಳು. ಭೌತಶಾಸ್ತ್ರವೇ ಮೊದಲಾದ ಪತ್ರಿಕೆಗಳು ಮುಗಿದಿತ್ತು. ಗಣಿತ ಪತ್ರಿಕೆಯಲ್ಲಿ ನೂರಕ್ಕೆ ನೂರು ತೆಗೆದುಕೊಳ್ಳಲೇಬೇಕು ಎಂದು ಹಟ ಹೊತ್ತಿದ್ದಳು. ಮೂರು ದಿನ ನಿದ್ದೆ ಬಿಟ್ಟು ಪ್ರಯತ್ನ ಮಾಡಿದ್ದಳು. ಪರೀಕ್ಷೆಯ ದಿನ ಪ್ರಶ್ನೆ ಪತ್ರಿಕೆ ಕಂಡಾಗ ತುಂಬ ಸುಲಭ ಎಂದು ಅನಿಸಿತು. ಸ್ವಲ್ಪ ಬರೆದಾದ ಮೇಲೆ ಆಯಾಸವಾಗಿ ಡೆಸ್ಕಿನ ಮೇಲೆ ತುಸು ವಿಶ್ರಾಂತಿ ಮಾಡಿಕೊಳ್ಳುತ್ತೇನೆ ಎಂದು ತಲೆಯನ್ನು ಇಟ್ಟಳು. ಗಾಢ ನಿದ್ದೆ ಬಂದುಹೋಯಿತು. ಸುಮಾರು ಒಂದೂವರೆ ಗಂಟೆ ಮಲಗಿಬಿಟ್ಟಳು. ಅದು ಸೆಂಟರ್ ಬೇರೆಯಾಗಿದ್ದ ಕಾರಣ– ಕೊಠಡಿ ಮೇಲ್ವಿಚಾರಕರು ಅವಳು ವಿದ್ಯಾಭ್ಯಾಸ ನಡೆಸುತ್ತಿದ್ದ ಕಾಲೇಜನ್ನು ದ್ವೇಷಿಸುತ್ತಿದ್ದ ಕಾರಣ– ಅವಳನ್ನು ಎಚ್ಚರಿಸಲು ಹೋಗಲೇ ಇಲ್ಲ. ಪರೀಕ್ಷೆ ಮುಗಿಯಲು ಅರ್ಧ ಗಂಟೆ ಇರುವಾಗ ಎಚ್ಚರವಾಯಿತು. ಗಡಿಬಿಡಿಯಲ್ಲಿ ಒಂದಿಷ್ಟು ಬರೆದಳು. ಕೊಠಡಿ ಮೇಲ್ವಿಚಾರಕರ ಬಳಿ ನನಗೆ ಸ್ವಲ್ಪ ಹೆಚ್ಚು ಸಮಯ ಕೊಡಿ ಎಂದು ವಿನಂತಿಸಿಕೊಂಡಳು. ಅವರು ನಿರಾಕರಿಸಿದರು. ತನಗೆ ನೂರಕ್ಕೆ ನೂರು ಅಂಕ ಬರುವುದಿಲ್ಲ ಎಂದು ಖಾತ್ರಿ ಆದ ಕೂಡಲೇ ಮರಳಿ ತನ್ನ ಹಾಸ್ಟೆಲಿಗೆ ಬಂದವಳು ಆತ್ಮಹತ್ಯೆಗೆ ಶರಣಾದಳು.

ಮತ್ತೊಬ್ಬ ವಿದ್ಯಾರ್ಥಿನಿ ಪಿಯುಸಿ ತರಗತಿಗೆ ನಡೆಸುವ ವಾರದ ಕ್ಲಾಸ್ ಟೆಸ್ಟಿಗೆ ಹಾಜರಾಗಿದ್ದಳು. ಅವಳಿಗೆ 85 ಅಂಕಗಳು ಬಂದಿದ್ದವು. ಮರುದಿನ ಬೆಳಿಗ್ಗೆ ಎದ್ದು ಹಾಸ್ಟೆಲಿನಲ್ಲಿ ಓದುತ್ತಿದ್ದವಳಿಗೆ ಊರಿನಲ್ಲಿರುವ ಅಮ್ಮನ ಜೊತೆ ಮಾತನಾಡೋಣ ಅನಿಸಿತು. ಕಾಯಿನ್ ಬಾಕ್ಸ್‌ನಿಂದ ಅಮ್ಮನಿಗೆ ಕರೆ ಮಾಡಿದಳು. ಹಿಂದಿನ ದಿನ ಕ್ಲಾಸ್ ಟೆಸ್ಟ್ ನಡೆದಿತ್ತು. ಬಯಾಲಜಿ ಪತ್ರಿಕೆಯಲ್ಲಿ ನೂರಕ್ಕೆ 85 ಬಂದಿತ್ತು ಎಂದು ಹೇಳಿದಳು. ಆ ಕಡೆಯಿಂದ ತಾಯಿ 'ಇಷ್ಟು ಕಮ್ಮಿ ಅಂಕ ಬರುವುದಿದ್ದರೆ ನಿನ್ನನ್ನು ಆ ಸಂಸ್ಥೆಗೆ ಸೇರಿಸಿ ಏನು ಪ್ರಯೋಜನ?' ಎಂದು ಹಿಗ್ಗಾಮುಗ್ಗಾ ನಿಂದಿಸಿದರಂತೆ. ನೊಂದುಕೊಂಡ ಆಕೆ ಹತ್ತೇ ನಿಮಿಷದಲ್ಲಿ ಆತ್ಮಹತ್ಯೆಗೆ ಶರಣಾದಳು.

ಅಂದು ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿತ್ತು. ನಾನು ಬೇರೊಂದು ಊರಿನಲ್ಲಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿ ದುಡಿಯುತ್ತಿರುವವ. ಕಾಲೇಜು ಮುಗಿಸಿ ಮನೆಗೆ ಬರುತ್ತಿರುವಾಗ ಒಬ್ಬ ವಿದ್ಯಾರ್ಥಿ ದಾರಿ ಬದಿಯಲ್ಲಿ ತಲೆ ಕೆಳಗೆ ಹಾಕಿ ಕುಳಿತಿರುವುದು ಕಂಡಿತು. ಆಗಷ್ಟೇ ಆ ವಿದ್ಯಾಸಂಸ್ಥೆ ಮೂರು ನಾಲ್ಕು ಆತ್ಮಹತ್ಯೆಗಳನ್ನು ಕಂಡಿತ್ತು. ಈ ವಿದ್ಯಾರ್ಥಿಯ ಸಮಸ್ಯೆಯು ಏನೋ ಇರಬಹುದು ಎಂದು ಹತ್ತಿರ ಹೋಗಿ ಮಾತನಾಡಿಸಿದೆ. ಆದ ಗದ್ಗದಿತನಾದ. ಒಂದು ಅಂಕ ಕಡಿಮೆಯಾಯಿತು ಎಂದ. ನಾನು ಫೇಲ್ ಆಗಿರಬಹುದು ಎಂದು ಭಾವಿಸಿದರೆ ಉಳಿದ ಎಲ್ಲ ಪತ್ರಿಕೆಗಳಲ್ಲಿ ನೂರಕ್ಕೆ ನೂರು ಬಂದಿತ್ತು. ಬಯಾಲಜಿಯಲ್ಲಿ 99 ಬಂದಿತ್ತು. ಇದು ಮನೆಯಲ್ಲಿ ಗೊತ್ತಾದರೆ ಬಯ್ಯುತ್ತಾರೆ ಎಂದು ಅಳುತ್ತಿದ್ದ. ನೊಂದ ಆತನನ್ನು ಸಮಾಧಾನಪಡಿಸಿ ಪರಿಚಯದ